ಅ) ಮೈಸೂರು ಮಿನರಲ್ಸ್ ಲಿ. ಸಂಸ್ಥೆಯ ಪರವಾಗಿ ನವಮಂಗಳೂರು ಬಂದರಿನಲ್ಲಿ ಕೆಲಸ ಮಾಡುತ್ತಿರುವ ಖಾಸಗಿ ಸಿ.ಎಸ್.ಐ. ವಿಜಂಟರುಗಳು ಯಾರು?

ಆ) ಮೇಲ್ಕಂಡ ಕೆಲಸಗಳನ್ನು ಸಾರ್ವತ್ರಿಕ ಪ್ರಕರಣೆ ನೀಡದೆ ನಮೀಕರಿಸಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸದರೀ ವಿಚಾರದ ಬಗ್ಗೆ ವಿಚಾರಣೆ ನಡೆಸಲು ಸರ್ಕಾರ ಸಿದ್ದವಿದೆಯೇ?

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು): 1) ಎಕ್ಸಪೋರ್ಟ್ ಟ್ರೇಡ್ ಲಿಂಕ್ ಎಜೆನ್ಸೀಸ್ ಲಾಲ್‌ಬಾಗ್, ಮಂಗಳೂರು ಅವರು ಗ್ರಾನೈಟ್ ಕಲ್ಲುಗಳ ಬಂದರು ಕಾರ್ಯಕ್ಕಾಗಿ.

2) ಮೆ: ಅಲ್ವಾರೀಸ್ ಅಂಡ್ ಥಾಮಸ್, ಹಂಪನ ಕಟ್ಟೆ, ಮಂಗಳೂರು ಅವರು ಕ್ರೋಮೈಟ್ ಅದುರಿನ ಬಂದರು ಕಾರ್ಯಕ್ಕಾಗಿ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಸರ್ಕಾರಿ ಸ್ವಾಮ್ಯದ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹಂಚಿಕೆ

3703 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.?

ಅ) ರಾಜ್ಯ ಸರ್ಕಾರಿ ಸ್ವಾಮ್ಯದ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮವು 1-1-91 ರಿಂದ 15-8-91ರ ವರೆಗೆ ಯಾವ್ಯಾವ ಸಂಸ್ಥೆಗಳ ಮೇಲೆ ಬಂಡವಾಳ ಹೂಡಿದೆ, (ವಿವರಗಳನ್ನೊದಗಿಸುವುದು)

ಆ) ಮೇಲ್ಕಂಡ ಉದ್ಯಮಗಳ ವಿವರಗಳು ಹಾಗೂ ಹೂಡಲಿರುವ ಬಂಡವಾಳದ ಮೊತ್ತದ ವಿವರಗಳನ್ನೊದಗಿಸುವುದು.

ಇ) ಮೇಲ್ಕಂಡ ಉದ್ಯಮಗಳ ಆಯ್ಕೆಗೆ ಸರ್ಕಾರ ಅನುಸರಿಸಿದ ನೀತಿಗಳೇನು?

ಶ್ರೀ ನಜೀರ್ ಅಹಮದ್ (ಸಣ್ಣ ಕೈಗಾರಿಕಾ ರಾಜ್ಯ ಸಚಿವರು):

ಅ) ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮವು ಈ ಕೆಳಕಂಡ ಸಂಸ್ಥೆಗಳಿಗೆ ಬಂಡವಾಳವನ್ನು ಹೂಡಿದೆ :

1) ಕೆ.ಜಿ.ಗ್ಲೂಕೋ ಬಿಯಾಲ್ಸ್ ಲಿ.

2) ಆದಿತ್ಯ ಹಾರ್ಮೋಲಾಜಿಕಲ್ಸ್ ಲಿಮಿಟೆಡ್

3) ಕರ್ನಾಟಕ ಆಂಟಿಬಿಯಾಟಿಕ್ಸ್ ಲಿ.

4) ಕರ್ನಾಟಕ ಬೇಲ್ಡ ಆಟೋ ಲಿ.

5) ವಿಕ್ರಾಂತ್ ಟೈರ್ಸ್ ಲಿ.

6) ಯುಕೇನ್ ಇಂಡಿಯಾ ಲಿ.

7) ಸಹ್ಯಾದ್ರಿ ಇಂಡಸ್ಟ್ರೀಯಲ್ ಗ್ಯಾಸೆಸ್ ಲಿ.

ಆ)

	(ರೂ. ಲಕ್ಷಗಳಲ್ಲಿ)
1) ಕೆ.ಜಿ.ಗ್ಲೂಕೋ ಬಿಯಾಲ್ಸ್ ಲಿ.	64.35
2) ಆದಿತ್ಯಾ ಹಾರ್ಮೋಲಾಜಿಕಲ್ ಲಿ.	3.85

3) ಕರ್ನಾಟಕ ಆಂಟಿಬಿಯಾಟಿಕ್ಸ್ ಲಿ.	11.82
4) ಕರ್ನಾಟಕ ಬೆಲಾದ್ ಆಟೋ ಲಿ.	0.90
5) ವಿಕ್ರಾಂತ್ ಟೈರ್ಸ್ ಲಿಮಿಟೆಡ್	200.00
6) ಯುಕೇನ್ ಇಂಡಿಯಾ ಲಿಮಿಟೆಡ್	5.41
7) ಸಹ್ಯಾದ್ರಿ ಇಂಡಸ್ಟ್ರೀಯಲ್ಲಿ ಗ್ಯಾಸಸ್ ಲಿ.	1.85
ಒಟ್ಟು	288.18

ಇ) ಯೋಜನಾ ವರದಿಯನ್ನು ತಯಾರಿಸಿದ ನಂತರ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮವು ಪ್ರಮುಖ ದಿನಪತ್ರಿಕೆಗಳಾದ ಡೆಕಾನ್ ಹೆರಾಲ್ಡ್ ಎಕಾನಾಮಿಕ್ ಟೈಮ್ಸ್, ಪ್ರಜಾವಾಣಿ, ಫೈನಾನ್ಸಿಯಲ್ ಎಕ್ಸ್‌ಪ್ರೆಸ್‌ಗಳಲ್ಲಿ ಜಂಟಿಯಾಗಿ ಉದ್ಯಮವನ್ನು ಸ್ಥಾಪಿಸಲು ಆಹ್ವಾನಿಸಿ ಪ್ರಕಟಿಸಲಾಗುವುದು.

ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮದಿಂದ ರಚಿಸಲ್ಪಟ್ಟ ಉಪ ಸಮಿತಿಯ ನಿರ್ದೇಶಕ ಮಂಡಳಿಯು ಉದ್ಯಮದಾರರ ಆರ್ಥಿಕ ಸ್ಥಿತಿ ಉದ್ಯೋಗ ಪ್ರಾವಿಣ್ಯತೆ, ಹಾಗೂ ಇತರೆ ಹಿನ್ನೆಲೆಗಳ ಆಧಾರದ ಮೇಲೆ ಸಂದರ್ಶನ ನಡೆಸಿ, ಜಂಟಿ ಉದ್ಯಮದಾರರನ್ನು ಆಯ್ಕೆ ಮಾಡಲಾಗುವುದು. ಉಪ ಸಮಿತಿಯ ನಿರ್ದೇಶಕರ ಮಂಡಳಿಯ ತೀರ್ಮಾನವನ್ನು ಜಂಟಿ ಉದ್ಯಮದಾರರಿಗೆ ತಿಳಿಸುವ ಮುನ್ನ ಮಂಡಳಿಯ ಅನುಮೋದನೆಯನ್ನು ಪಡೆಯಲಾಗುವುದು. ಸ್ಥಳೀಯ ಉದ್ಯಮದಾರರಿಗೆ ಆದ್ಯತೆ ನೀಡಲಾಗುವುದು.

ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಅವರಿಂದ ರೆಕ್ಟಿಫೈಡ್ ಸ್ಪಿರಿಟ್ ಖರೀದಿ.

3704 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಲಿಮಿಟೆಡ್ ಮಂಡ್ಯರವರಿಗೆ ಸಂಸ್ಥೆಗೆ ಬೇಕಾದ ರೆಕ್ಟಿಫೈಡ್ ಸ್ಪಿರೀಟನ್ನು ಬಹಿರಂಗ ಮಾರುಕಟ್ಟೆಯಲ್ಲಿ ಖರೀದಿ ಮಾಡುತ್ತಿದೆಯೇ?*

ಆ) *ಮೈಸೂರು ಅಸಿಟೇಟ್ ಸಂಸ್ಥೆಗೆ ಬೇಕಾಗ ರೆಕ್ಟಿಫೈಡ್ ಸ್ಪಿರೀಟನ್ನು ಒದಗಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು?*

ಇ) *ಮೈಸೂರು ಅಸಿಟೇಟ್ ಸಂಸ್ಥೆ ಅನುಭವಿಸುತ್ತಿರುವ ನಷ್ಟದ ಪ್ರಮಾಣವೇನು ಕಳೆದ 3 ವರ್ಷದ ಪ್ರತ್ಯೇಕ ವಿವರಗಳನ್ನೊದಗಿಸುವುದು?*

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಇಲ್ಲ.

ಆ) ರೆಕ್ಟಿಫೈಡ್ ಸ್ಪಿರಿಟಿನ ಲಭ್ಯತೆಯನ್ನು ಅನುಸರಿಸಿ ಒದಗಿಸಲಾಗುತ್ತಿದೆ.

ಇ) ಕಂಪನಿಯ ಕಳೆದ 3 ವರ್ಷದ ಲಾಭ:ನಷ್ಟದ ವಿವರಗಳು ಈ ಕೆಳಕಂಡಂತಿವೆ.

1988-89 ರೂ. 125 ಲಕ್ಷ (ನಷ್ಟ)

1989-90 ರೂ. 150 ಲಕ್ಷ (ಲಾಭ)